ಇವಳಿಗೆ ಸಿಗುತ್ತಿರಲಿಲ್ಲ, ತಿಂಡಿಗಳಾಗಲಿ, ಹೊಸ ಬಟ್ಟೆಗಳಾಗಲಿ... ಸರಿ, ನಾನು ಡಬ್ಬಿಯಲ್ಲಿದ್ದ ಊಟ, ಮನೆಯಲ್ಲಿಟ್ಟಿದ್ದ ತಿಂಡಿ, ಹಣ್ಣುಗಳು ಏನೂ ಸಿಗದೇ ಹೋದರೆ ಬೆಲ್ಲವನ್ನಾದರೂ ತೆಗೆದುಕೊಂಡು ಹೋಗಿ ಕೊಡುತ್ತಿದ್ದೆ. ಅವಳು ಖುಷಿಯಿಂದ ನಕ್ಕಾಗೆಲ್ಲ ನಂಗೂ ಖುಷಿ. ಆ ವರ್ಷ ಚೌತಿಗೆ ಅಜ್ಜಮ್ಮ ಊರಿಗೆ ಹೋಗಲೆಂದು, ಅಮ್ಮ ಹಸಿರು ಎಲೆ ಎಲೆಗಳ ಅವಾಗಷ್ಟೇ ಟ್ರೆಂಡ್ ಆಗುತ್ತಿದ್ದ ಚೂಡಿದಾರವನ್ನು ಇಬ್ಬರಿಗೂ ಹೊಲಿಸಿದ್ದರು. ಇಬ್ಬರೂ ಅದು ಟೈಲರ್ ಶಾಪಿನಿಂದ ಮನೆಗೆ ಬಂದ ಕೂಡಲೇ ತೊಟ್ಟು ನೋಡಿ ಕುಣಿದದ್ದೂ ಆಗಿತ್ತು. ಮರುದಿನ ನನ್ನ ಸ್ನೇಹಿತೆ ಶಾಲೆಯಲ್ಲಿ ‘ನೋಡೇ, ಹಬ್ಬ ಬಂತು. ನಮ್ಮ ಅಪ್ಪ, ಚಿಕ್ಕಮ್ಮನ ಮಕ್ಕಳಿಗಷ್ಟೇ ಬಟ್ಟೆ ಕೊಡಿಸಿದ್ದಾರೆ, ನಮಗೆ ಮಾತ್ರ ಕೊಡಿಸಲೇ ಇಲ್ಲ’ ಎಂದಳು. ನನ್ನ ಹೊಸ ಚೂಡಿದಾರ್ ಬ್ಯಾಗಲ್ಲಿ ತುರುಕಿಕೊಂಡು ಬಂದು ಅವಳಿಗೆ ಕೊಟ್ಟೆ.

ಊರಿಗೆ ಹೊರಡೋ ಮೊದಲು ಅಮ್ಮ ಅದೆಷ್ಟು ಹುಡುಕಿದರೂ ಮನೆಯಿಡೀ ಸಿಗಲಿಲ್ಲ. ಎಲ್ಲಿ ಸಿಗುತ್ತದೆ?! ಚೌತಿಗೆ ಬೇರೆ ಬಟ್ಟೆ ಹಾಕಿದ್ದಾಯ್ತು. ಒಂದು ದಿನ ನಾನು, ಅಕ್ಕ ಅಯ್ಯಪ್ಪಸ್ವಾಮಿ ದೇವಸ್ಥಾನದ ಬಳಿ ನಡೆದುಕೊಂಡು ಹೋಗುತ್ತಿದ್ದಾಗ ಅದೇ ಚೂಡಿದಾರ ತೊಟ್ಟು ಹೋಗುತ್ತಿದ್ದ ನನ್ನ ಸ್ನೇಹಿತೆಯನ್ನು ನೋಡಿ ಅಕ್ಕ ಬೆಚ್ಚಿಬಿದ್ದಳು. ‘ನಿಜ ಹೇಳು, ನಿಂದೇ ಅಲ್ವಾ ಆ ಡ್ರೆಸ್? ತಡಿ, ಅಮ್ಮನಿಗೆ ಹೇಳ್ತೇನೆ’ ಎಂದು ಬೆದರಿಸಿದವಳನ್ನು ತಡೆಯಲು ನಾ ಮಾಡಿದ ಸರ್ಕಸ್ ಅಷ್ಟಿಷ್ಟಲ್ಲ. ಪ್ರತೀ ಸಲ ಜಗಳವಾದಾಗ, ಹೇಳಿದ ಕೆಲಸ ನಾ ಮಾಡದಿದ್ದಾಗ ಅದೊಂದು ಬ್ಲಾಕ್‌ಮೇಲ್ ಅಸ್ತ್ರವಾಗಿತ್ತು ಅವಳಿಗೆ! ಯಾಕೋ ಗೊತ್ತಿಲ್ಲ, ಅವಳೆಂದೂ ಹೇಳಲೇ ಇಲ್ಲ. ಮುಂದಿನ ವರ್ಷದಿಂದ ನನ್ನ ಸ್ನೇಹಿತೆ ಶಾಲೆಗೆ ಬರಲೂ ಇಲ್ಲ. ಮುಂದೊಂದು ದಿನ ನಾನೇ ಅಣ್ಣ–ಅಮ್ಮನಿಗೆ ಹೇಳುವ ವೇಳೆಗೆ ನನ್ನ ಡಿಗ್ರಿ ಮುಗಿದಿತ್ತು! ‘ಅದಕ್ಕೇ ಅಲ್ಲವೇ ಅಕ್ಕ ನಿಂಗೆ ಕರ್ಣ ಅಂತ ಹೆಸರಿಟ್ಟಿದ್ದು’ ಎಂದು ಇಬ್ಬರೂ ಮನಸ್ಸು ಬಿಚ್ಚಿ ನಕ್ಕಿದ್ದರು.



ಡ್ರೆಸ್ ಹಗರಣವಾದಾಗ ಅಕ್ಕ ಒಂದು ಮಾತು ಹೇಳಿದ್ದಳು, ‘ನೀನು ಅಣ್ಣ–ಅಮ್ಮನಿಗೆ ಹೇಳದೆ ಈ ಥರ ಮಾಡ್ತೀಯಲ್ಲಾ, ತಪ್ಪು ಅಂತ ಒಂದಿನ ನಿಂಗೆ ಗೊತ್ತಾಗುತ್ತೆ’ ಅಂತ. ಗೊತ್ತಾಗಲಿಕ್ಕೆ ಹೆಚ್ಚು ಸಮಯ ಬೇಕಾಗಲಿಲ್ಲ.

ಅಜ್ಜಮ್ಮ ಊರಿಗೆ ಹೋದಾಗೆಲ್ಲ ದೊಡ್ಡಮ್ಮ ನಂಗೂ ಅಕ್ಕನಿಗೂ ಐದೋ ಹತ್ತೋ ರೂಪಾಯಿಗಳನ್ನು ಕೊಡುವುದು ರೂಢಿ. ಅದು ಸೀದಾ ಅಮ್ಮನ ಕೈಗೆ ಹೋಗುತ್ತಿತ್ತು. ಒಂದು ಸಲ, ಊರಿಂದ ಬೇಗ ಹೊರಟುಬಂದೆವು. ಮಧ್ಯಾಹ್ನಕ್ಕೆಲ್ಲ ಮೂಡಿಗೆರೆಯಲ್ಲಿದ್ದೆವು. ಇಡೀ ದಿನ ರಜೆಯಾಗುವ ಬದಲು, ಮಧ್ಯಾಹ್ನವಾದರೂ ಶಾಲೆಗೆ ಹೋಗಲಿ ಎಂದು ಅಮ್ಮ ಕರಕೊಂಡು ಬಂದು ಶಾಲೆಗೆ ಬಿಟ್ಟರು. ಆ ಸಲ ದೊಡ್ಡಮ್ಮ ಕೊಟ್ಟ ಹತ್ತು ರೂಪಾಯಿ ನಮ್ಮ ಕೈಯಲ್ಲೇ ಉಳಿಯಿತು. ನನ್ನ ಪಾಲಿನ ಹತ್ತು ರೂಪಾಯಿಯ ಆ ನೋಟನ್ನು ಶಾಲೆಗೆ ಬಂದ ತಕ್ಷಣ ನಾನು ‘ನೀತಿ ಬೋಧೆ’ ಪುಸ್ತಕದ ಬೈಂಡ್ ನಡುವೆ ಹಾಕಿಟ್ಟೆ, ಮನೆಗೆ ಹೋದ ಮೇಲೆ ಅಮ್ಮನಿಗೆ ಕೊಡೋಣವೆಂದು. ಆ ದಿನ ಮಧ್ಯಾಹ್ನದ ಮೊದಲ ಪೀರಿಯಡಿನಲ್ಲಿ ಸ್ನೇಹಾ ಎಂಬ ಹುಡುಗಿಯೊಬ್ಬಳು ಜೋರಾಗಿ ಅಳಲಾರಂಭಿಸಿದಳು. ಅವಳ ತಂದೆ ಸಾಕ್ಸ್ ಕೊಳ್ಳಲೆಂದು ಅವಳಿಗೆ ಹತ್ತು ರೂಪಾಯಿ ಕೊಟ್ಟಿದ್ದರಂತೆ. ಅದು ಕಳೆದುಕೊಂಡಿದ್ದಾಳೆ. ಕ್ಲಾಸು ತೆಗೆದುಕೊಳ್ಳುತ್ತಿದ್ದ ಸಿಸ್ಟರ್, ‘ಮಕ್ಕಳೇ, ಸ್ನೇಹಾ ದುಡ್ಡು ಯಾರು ತೆಗೆದಿದ್ದರೂ ಕೊಟ್ಟುಬಿಡಿ’ ಅಂದರು. ಯಾರೂ ಮುಂದೆ ಬರಲಿಲ್ಲ. ಅತ್ತೂ ಅತ್ತೂ ಅವಳ ಮುಖ ಕೆಂಪಾಗಿತ್ತು. ಇನ್ನೊಂದು ಪೀರಿಯಡ್ ಸ್ಟಾರ್ಟ್ ಆಗೋ ಮೊದಲು ಒಂದೈದು ನಿಮಿಷದ ಬ್ರೇಕ್ ಸಿಕ್ಕಿದಾಗ, ‘ಅಪ್ಪ ಹೊಡೀತಾರೆ’ ಎನ್ನುತ್ತಾ ಬಿಕ್ಕುತ್ತಿದ್ದಳು.

ಅವಳನ್ನೇ ನೋಡುತ್ತಿದ್ದ ನಾನು, ಪುಸ್ತಕದ ಬೈಂಡಿನ ನಡುವಿದ್ದ ಹತ್ತು ರೂಪಾಯಿ ನೋಟನ್ನು ತೆಗೆದು ಅವಳಿಗೆ ಕೊಟ್ಟುಬಿಟ್ಟೆ.

ನಮ್ಮ ಕ್ಲಾಸಿನಿಂದ ಹೊರಹೋದ ಸಿಸ್ಟರ್, ಮುಂದಿನ ಪೀರಿಯಡ್ ತೆಗೆದುಕೊಳ್ಳಲು ಬರುತ್ತಿದ್ದ, ಶಾಲೆಗೆ ಹೊಸದಾಗಿ ಬಂದ ಟೀಚರರಿಗೆ ಸ್ನೇಹಾಳ ಹಣ ಕಳೆದ ವಿಷಯ ಹೇಳಿದ್ದಾರೆ. ಅವರು ಬಂದೊಡನೆ ದೊಡ್ಡ, ದಪ್ಪ ಸ್ವರದಲ್ಲಿ, ‘ಯಾರದು ಸ್ನೇಹಾಳ ದುಡ್ಡು ತೆಗೆದಿದ್ದು, ಕೊಟ್ಟು ಬಿಡಿ, ಇಲ್ಲಾ ಇಡೀ ಕ್ಲಾಸಿಗೆ ಬರೆ ಬೀಳುತ್ತೆ’ ಎಂದು ಗುಡುಗಿದರು. ಸ್ನೇಹಾ ಎದ್ದು ನಿಂತು ‘ಟೀಚರ್, ಸೌಮ್ಯ ಕದ್ದಿದ್ದಳು, ನೋಡಿ ವಾಪಸು ಕೊಟ್ಟಿದ್ದಾಳೆ’ ಎಂದು ಆ ಹತ್ತರ ನೋಟು ತೋರಿಸಿದಳು. ಅವರೋ ಹತ್ತಿರ ಕರೆದು, ಮಾತನಾಡಲೂ ಅವಕಾಶ ಕೊಡದೆ, ದಪ್ಪ ಬೆತ್ತದಲ್ಲಿ ಹಿಂಗಾಲಿಗೆ ಬರೆ ಬೀಳುವಂತೆ ಹೊಡೆದಿದ್ದಲ್ಲದೇ ಉಳಿದ ಪೀರಿಯಡ್ ಇಡೀ ನನ್ನನ್ನು ಮೊಣಕಾಲೂರಿಸಿ ಬೋರ್ಡಿನ ಹತ್ತಿರ ನಿಲ್ಲಿಸಿದರು. ಆ ಹತ್ತು ರೂಪಾಯಿ ನೋಟು ಅವರ ಟೇಬಲ್ ಮೇಲೆ ಡಸ್ಟರ್ ಕೆಳಗಿತ್ತು. ಇಡೀ ಕ್ಲಾಸಿಗೆ ಅವತ್ತು ನನ್ನ ಬಗ್ಗೆ ನೀತಿಪಾಠ. ನಾನು ಎಲ್ಲರೆದುರು ಕಳ್ಳಿಯಾಗಿದ್ದೆ. ಹೊರಗಿನವರ ಬಳಿ ಒಂದೂ ದಿನವೂ ಬೈಸಿಕೊಳ್ಳದೆ, ಹೊಡೆಸಿಕೊಳ್ಳದವಳಿಗೆ ಅಂದಾದ ಗಾಯದ ಕಲೆ ಹಾಗೇ ಉಳಿದುಹೋಗಿದೆ.

ಆ ಪೀರಿಯಡ್ ಮುಗಿಯುವ ಹೊತ್ತಿಗೆ ನಮ್ಮ ಕ್ಲಾಸ್ ಎದುರು ಹೆಡ್ ಮಿಸ್ ಹೋಗುತ್ತಿದ್ದವರು, ಮೊಣಕಾಲೂರಿ ನಿಂತ ನನ್ನನ್ನು ನೋಡಿ ಕ್ಲಾಸಿನ ಒಳಗೆ ಬಂದರು. ಟೀಚರ್ ಬಾಯಿಯಿಂದ ಇಡೀ ಪ್ರಹಸನ ಕೇಳಿ ನನ್ನ ಕಡೆ ತಿರುಗಿ ‘ಏನಮ್ಮ ಸೌಮ್ಯ, ಎಲ್ಲಿಂದ ಬಂತು ದುಡ್ಡು?’ ಎಂದು ಕೇಳಿದರು. ಅಷ್ಟೂ ಹೊತ್ತು ತಲೆಯೆತ್ತದೆ ಅಳುವನ್ನು ತಡೆಹಿಡಿದು ಕೂತಿದ್ದವಳು, ಇನ್ನಷ್ಟು ಅಳುವನ್ನು ನುಂಗಿ, ಕತ್ತೆತ್ತಿ ನಡುಗುವ ಸ್ವರದಲ್ಲಿ ‘ಇವತ್ತು ಅಜ್ಜಿ ಊರಿಂದ ಬಂದೆ ಮಿಸ್, ದೊಡ್ಡಮ್ಮ ನಂಗೂ ಅಕ್ಕನಿಗೂ ಕೊಟ್ಟಿದ್ದರು’ ಎಂದೆ.

ಕೂಡಲೇ ಅವರು ಅದೇ ಶಾಲೆಯಲ್ಲಿದ್ದ ಅಕ್ಕನನ್ನು ಕರೆಸಿದರು. ಅಕ್ಕನನ್ನು ನೋಡಿಯೇ ಕಣ್ಣೀರು ನನ್ನ ಮಾತು ಕೇಳದೇ ಉರುಳಲು ಆರಂಭಿಸಿತು. ನನ್ನನ್ನು ನೋಡಿ ಅವಳ ಕಣ್ಣಲ್ಲೂ ನೀರು ತುಂಬಿತು. ಹೆಡ್ ಮಿಸ್ ಕಡೆ ತಿರುಗಿ ಅವಳು ನಿಜವನ್ನು ತಿಳಿಸಿದಾಗ ಅವಳ ಕಂಠವೂ ನಡುಗುತ್ತಿತ್ತು. ಹೆಡ್ ಮಿಸ್ ಆ ಟೀಚರರಿಗೆ, ‘ಅವರಮ್ಮ ಹೈಸ್ಕೂಲು ಟೀಚರ್, ಅವಳಕ್ಕ ಇದೇ ಶಾಲೆಯ ಒಳ್ಳೆ ವಿದ್ಯಾರ್ಥಿನಿ. ಇವಳೂ ಕ್ಲಾಸಿನಲ್ಲಿ ಮೊದಲು. ಅದು ಹೇಗೆ ಅವಳನ್ನು ಅನುಮಾನಿಸಿದಿರಿ? ಹೊಡೆದಿರಿ? ಅವರಮ್ಮ ಬಂದು ಕೇಳಿದರೆ ನಾನೇನು ಹೇಳಲಿ?’ ಎಂದು ಕೇಳಿದರು. ಅದಕ್ಕವರು ವ್ಯಂಗ್ಯವಾಗಿ ‘ಅಯ್ಯೋ, ಕದಿಯದೇ ಹೋದ್ರೆ ಇವಳ್ಯಾಕೆ ಅವಳಿಗೆ ತೆಗೆದುಕೊಡಬೇಕಿತ್ತು?’ ಎಂದರು. ನಾನು ಕಣ್ಣೀರನ್ನು ಒರೆಸಿಕೊಳ್ಳುತ್ತಾ ಅವರನ್ನು ನೋಡಿ, ಗಟ್ಟಿಯಾಗಿ ‘ಪಾಪ, ಅವಳು ಅಳ್ತಾ ಇದ್ದಳಲ್ಲ, ಮನೆಗೆ ಹೋದಾಗ ಅವರಪ್ಪ ಅವಳಿಗೆ ಹೊಡೆದ್ರೆ? ಅದಕ್ಕೆ ಕೊಟ್ಟಿದ್ದು’ ಅಂದೆ.

ಮನೆಗೆ ಬರುತ್ತಿದ್ದಂತೆಯೇ ಅಮ್ಮನಿಗೆ ನನ್ನ ಸಪ್ಪೆ ಮುಖ ನೋಡಿ ಗಾಬರಿಯಾಯಿತು. ಹಣೆ, ಕುತ್ತಿಗೆ ಎಲ್ಲಾ ಮುಟ್ಟಿ ನೋಡಿ ‘ಏನಾಯ್ತಮ್ಮ, ಯಾರಾದರೂ ಏನಾದರೂ ಅಂದರಾ?’ ಎಂದು ಇಬ್ಬರ ಮುಖ ನೋಡಿ ಕೇಳಿದರು. ಅಕ್ಕ ಎಲ್ಲಾ ವಿವರಿಸಿ ಹೇಳುತ್ತಿದ್ದಂತೆ, ನಾನು ಬೀಳುವ ಹೊಡೆತಕ್ಕೆ ರೆಡಿಯಾಗುತ್ತಿದ್ದೆ. ಅಮ್ಮ ಎಲ್ಲಾ ಕೇಳಿಸಿಕೊಂಡು ನನ್ನೆಡೆ ತಿರುಗಿದಾಗ ನಾನು, ‘ಅಮ್ಮಾ, ದೇವರಾಣೆ ನಾನವಳ ದುಡ್ಡು ಕದ್ದಿಲ್ಲ’ ಎಂದೆ. ನಾ ಹೆದರಿದಂತೆ ಹೊಡೆಯುವ ಬದಲು ಅಮ್ಮ ಎತ್ತಿ ತೊಡೆಯಲ್ಲಿ ಕೂರಿಸಿಕೊಂಡು, ಹಿಂಗಾಲಿಗಾದ ಬರೆಯನ್ನು ಹಗುರಕ್ಕೆ ಬೆರಳಲ್ಲಿ ಸವರಿ, ‘ನೋವಾಗ್ತಿದೆಯಮ್ಮ?’ ಎಂದು ನಿಧಾನವಾಗಿ ಕೇಳಿದರು. ■